ದಲಿತ ಪ್ಯಾಂಥರಿನ ಪ್ರಭಾವವು ಕರ್ನಾಟಕದಲ್ಲಿ ಹುಟ್ಟುತ್ತಲಿದ್ದ ದಲಿತರ ಚಳವಳಿಗೆ ಪರೋಕ್ಷ ಪ್ರೇರಣೆ ನೀಡಿದವು. ಈ ಹಿನ್ನೆಲೆಯಲ್ಲಿ ಕನ್ನಡ ದಲಿತ ಸಾಹಿತ್ಯದಲ್ಲಿರುವ ಕಪ್ಪುಜನ, ಕಪ್ಪುಚಿರತೆ ಇತ್ಯಾದಿ ಪರಿಭಾಷೆಗಳು, ಮರಾಠಿ ದಲಿತ ಸಾಹಿತ್ಯ ಮತ್ತು ಅಮೆರಿಕದ ಕಪ್ಪುಸಾಹಿತ್ಯದ ಹೊಸನಂಟಿನ ಫಲಶ್ರುತಿಗಳಂತೆ ತೋರಿದರೆ ಸೋಜಿಗವಿಲ್ಲ.

## ಸಾಂಸ್ಕೃತಿಕ ನಾಯಕತ್ವ

ರಾಜಕಾರಣಿಯೊಬ್ಬರು ಪ್ರಾಸಂಗಿಕವಾಗಿ ಮಾಡಿದ ಸಾಹಿತ್ಯಿಕ ಹೇಳಿಕೆಯು ಕೋಲಾಹಲಕ್ಕೆ ಕಾರಣವಾಗಿದ್ದು, ಕರ್ನಾಟಕದ ರಾಜಕೀಯ ಚರಿತ್ರೆಗೆ ಹೊಸ ವಿದ್ಯಮಾನವಾಗಿತ್ತು. ರಾಜಕಾರಣದಲ್ಲಿ ತಮ್ಮನ್ನು ಮೀರಿ ಬೆಳೆಯುತ್ತಿರುವ ಮತ್ತು ತನ್ನ ಕ್ರಾಂತಿಕಾರಿ ಆಲೋಚನೆಗಳಿಂದ ಅಪಾಯಕಾರಿಯಾಗಿ ಕಾಣುವ ದಲಿತ ನಾಯಕನೊಬ್ಬನನ್ನು ತುಳಿಯಬೇಕೆಂಬ ಇರಾದೆಯಿಂದ, ಸಾಮಾಜಿಕವಾಗಿ, ರಾಜಕೀಯವಾಗಿ ಅಧಿಕಾರ ಹಿಡಿದವರು ಯೋಜಿತ ಕಾರ್ಯಾಚರಣೆ ಮಾಡಿದ್ದು ಸ್ಪಷ್ಟವಾಗಿತ್ತು. ದಲಿತರಿಗೆ ಬಿಬಿಯವರು ಮಂತ್ರಿಸ್ಥಾನ ಕಳೆದುಕೊಂಡಿದ್ದು, ದಲಿತರ ಪ್ರಜ್ಞಾವಂತಿಕೆ ಮತ್ತು ಪ್ರತಿಭೆಯನ್ನು ಹೊಸಕಿಹಾಕಿದ ಪ್ರತೀಕದಂತೆ ತೋರಿತು. ಈ ಬೆಳವಣಿಗೆಗಳು ಅವರಲ್ಲಿ ಹೊಸ ರಾಜಕೀಯ ಪ್ರಜ್ಞೆಯನ್ನು ಹುಟ್ಟಿಸಿದವು. ಇದನ್ನು ಅನಂತಮೂರ್ತಿಯವರು 'ದಲಿತರಲ್ಲಿ ಅರಿವಿನ ಸ್ಫೋಟ' ಎಂದು ಸರಿಯಾಗಿಯೇ ಗುರುತಿಸಿದರು. ತಮ್ಮ ಹಿತಕಾಯದ ಪಕ್ಷಗಳಿಗೆ ಸೋಲುಣಿಸುವ ಪದ್ಧತಿಯನ್ನು ಮಹಾರಾಷ್ಟ್ರದಲ್ಲಿ ದಲಿತರು ಆರಂಭಿಸಿದ್ದರು. ಈ ಹಾದಿಯಲ್ಲಿ ನಡೆದು ದಲಿತರು ಮೈಸೂರಿನಲ್ಲಿ ಚುನಾವಣೆ ಬಹಿಷ್ಕರಿಸಿ ಕಾಂಗ್ರೆಸ್ ಅಭ್ಯರ್ಥಿಯನ್ನು ಸೋಲಿಸಿ ಸಿಟ್ಟನ್ನು ಹೊರಹಾಕಿದರು.

ಈ ಪ್ರಸಂಗವನ್ನು 'ಸವರ್ಣೀಯ ಸಮಾಜ ದಲಿತ ನಾಯಕನೊಬ್ಬನು ಸ್ವಂತ ವ್ಯಕ್ತಿತ್ವ ಬೆಳೆಸಿಕೊಳ್ಳಬಾರದು, ಅನುಯಾಯಿಯಾಗಿರಬೇಕೆಂದು ಬಯಸುತ್ತದೆ. ಅದು ರಾಜಕಾರಣದಲ್ಲಿ ಕೊಡಬಯಸುವುದು ಹನುಮಂತನ ಪಾತ್ರ. ಬಸವಲಿಂಗಪ್ಪನವರು ಆ ಪಾತ್ರವನ್ನು ಒಪ್ಪಲು ನಿರಾಕರಿಸಿ ರಾಮನಾಗಲು ಹೋದರು. ಕೊನೆಗೆ ರಾಜಕಾರಣ ಅವರನ್ನು ರಾವಣ ಮಾಡಿತು. ರಾವಣನಾದರೂ ಚಿಂತೆಯಿಲ್ಲ ಹನುಮಂತನಾಗಲಾರೆ ಎಂದು ಅವರು ರಾವಣನ ಪಾತ್ರ ಆರಿಸಿಕೊಂಡರು' ಎಂದು ಸಿದ್ಧಲಿಂಗಯ್ಯ ವ್ಯಾಖ್ಯಾನಿಸುವುದುಂಟು. ಪುರಾಣಗಳನ್ನು ತಿರಸ್ಕರಿಸುವ ವಿಚಾರವಾದಿಯನ್ನು ಪುರಾಣ ಪ್ರತೀಕಗಳ ಮೂಲಕವೇ ಇಲ್ಲಿ ವರ್ಣಿಸಲಾಗುತ್ತಿದೆ. ಆದರೆ, ಆರ್ಯ ರಾಮನಿಗೆ ಬುಡಕಟ್ಟು ಪ್ರತಿನಿಧಿಯಾದ ದಾಸಭಾವದ ಹನುಮಂತ ಹಾಗೂ ಆರ್ಯರ ಪ್ರತಿರೋಧ ಮಾಡಿ ಪ್ರಾಣಕಳೆದುಕೊಂಡ ಸ್ವಾಭಿಮಾನಿ ರಾವಣನ ಚಿತ್ರಗಳು ಸಾಂಸ್ಕೃತಿಕವಾಗಿ ಅರ್ಥಪೂರ್ಣವಾಗಿವೆ.

ರಾಜಕೀಯ ನಾಯಕರಾಗಿದ್ದ ಬಿಬಿಯವರು ಮಂತ್ರಿಸ್ಥಾನ ಕಳೆದುಕೊಂಡ ಮೇಲೆ ವೈಚಾರಿಕ–ಸಾಂಸ್ಕೃತಿಕ ನಾಯಕರಾಗಿ ಮಾರ್ಪಟ್ಟರು. ಪೆರಿಯಾರ್, ಅಂಬೇಡ್ಕರ್, ಲೋಹಿಯಾ ಚಿಂತನೆಗಳಿಂದ ಪ್ರೇರಿತವಾಗಿದ್ದ ಹೊಸತಲೆಮಾರು, ಅವರ ಬೆನ್ನಿಗೆ ನಿಂತಿತು; ಅಂಬೇಡ್ಕರ್ ಬಳಿಕ ಹೊಮ್ಮಿದ ಪರ್ಯಾಯ ವೈಚಾರಿಕ–ರಾಜಕೀಯ ನಾಯಕನೆಂಬಂತೆ ಪರಿಭಾವಿಸಿತು. ಸಣ್ಣಪುಟ್ಟ ಊರುಗಳ ದಲಿತ ಕಾಲನಿಗಳಲ್ಲಿ ಜನ ಸಭೆಸೇರಿ ಅವರ ಮೆರವಣಿಗೆ ತೆಗೆದರು. 'ವಿಚಾರವಾದಿ ವಿದ್ಯಾರ್ಥಿ ಬಳಗ'ಕ್ಕೆ ಸೇರಿದ ಸಿದ್ಧಲಿಂಗಯ್ಯ, ಅಗ್ರಹಾರ ಕೃಷ್ಣಮೂರ್ತಿ, ಡಿ.ಆರ್. ನಾಗರಾಜ್, ಶೂದ್ರ ಶ್ರೀನಿವಾಸ, ಕೆ. ರಾಮಯ್ಯ ಮುಂತಾದವರು ಪುರಭವನದಲ್ಲಿ ಸಭೆ ಮಾಡಿ ಬಿಬಿಯವರನ್ನು ಸನ್ಮಾನಿಸಿದರು. ಸಭೆಯಲ್ಲಿ ಸಿದ್ಧಲಿಂಗಯ್ಯನವರು, 'ಕತ್ತೆ, ನಾಯಿ, ಕುರಿ, ಹುಳುಗಳಾಗಿ ಬಾಳುವುದನ್ನು ಬಿಟ್ಟು